ಶೆಡ್ಡುಗಳು ಖಾಲಿ ಇರುತ್ತದೆ. ಬಾಡಿಗೆ ಬಾಕಿಗಾಗಿ ಅಥವಾ ಇತರ ಕಾರಣಗಳಿಂದಾಗಿ 10 ಶೆಡ್ಡುಗಳು ಮುಚ್ಚಿರುತ್ತವೆ.

ನಷ್ಟದಲ್ಲಿರುವ ಹಾಗೂ ಮುಚ್ಚಿರುವ ಸರ್ಕಾರಿ ಸ್ವಾಮ್ಯದ ಭಾರೀ ಕೈಗಾರಿಕೆಗಳು

2123 (2530) ಶ್ರೀ ಸಭಾಪತಿ ಯು.ಆರ್. (ಉಡುಪಿ): ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸರ್ಕಾರಿ ಸ್ವಾಮ್ಯದ ಭಾರೀ ಕೈಗಾರಿಕೆಗಳು ಯಾವುವು;

ಆ) ಇವುಗಳಲ್ಲಿ ನಷ್ಟದಲ್ಲಿರುವ ಕೈಗಾರಿಕೆಗಳು ಎಷ್ಟು; ನಷ್ಟಕ್ಕೆ ಕಾರಣಗಳು ಏನು;

ಇ) ಇವುಗಳಲ್ಲಿ ಮುಚ್ಚಿರುವ ಭಾರೀ ಕೈಗಾರಿಕೆಗಳು ಯಾವುವು; ನಷ್ಟದಲ್ಲಿರುವ ಕೈಗಾರಿಕೆಗಳನ್ನು ಕಳಿದ 2001-02 ಮತ್ತು 2002-03ರ ಸಾಲಿನಲ್ಲಿ ಸರಿಪಡಿಸಲು ಅಥವಾ ಖಾಸಗೀಕರಣಗೊಳಿಸಲು ಸರ್ಕಾರದ ಮುಂದೆ ಪ್ರಸ್ತಾವನೆಗಳು ಇವೆಯೇ?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು)

ಅ) ರಾಜ್ಯದಲ್ಲಿನ ಸರ್ಕಾರಿ ಸ್ವಾಮ್ಯದ ಭಾರೀ ಮಧ್ಯಮ ಕೈಗಾರಿಕೆಗಳು ಈ ಕೆಳಕಂಡಂತಿವೆ.

1. ಮೈಸೂರು ಕಾಗದ ಕಾರ್ಖಾನೆ ನಿಯಮಿತ (ಎಂ.ಪಿ.ಎಂ)
2. ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತ (ಕವಿಕಾ)
3. ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ನಿಯಮಿತ (ಎಂ.ಇ.ಐ)
4. ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ (ಕೆ.ಎಸ್. ಅಂಡ್ ಡಿ.ಎಲ್)
5. ನ್ಯೂ ಗೌರ್ನಮೆಂಟ್ ಎಲೆಕ್ಟ್ರಿಕಲ್ ಫ್ಯಾಕ್ಟರಿ (ಎನ್.ಜಿ.ಇ.ಎಫ್)
6. ಮೈಸೂರು ದೀಪದ ಕಾರ್ಖಾನೆ ನಿಯಮಿತ (ಎಂ.ಎಲ್. ಡಬ್ಲ್ಯೂಎಲ್)
7. ಮೈಸೂರು ಮಿನರಲ್ಸ್ ನಿಯಮಿತ (ಎಂ.ಎಂ.ಎಲ್)
8. ಹಟ್ಟಿ ಗೋಲ್ಡ್ ಮೈನ್ಸ್ ನಿಯಮಿತ (ಹೆಚ್.ಜಿ.ಎಂ.ಎಲ್)
9. ಕರ್ನಾಟಕ ಟೆಲಿಕಾಂ ನಿಯಮಿತ (ಕೆ.ಟಿ.ಎಲ್)
10. ಮೈಸೂರು ಅಸಿಟೇಟ್ ಅಂಡ್ ಕೆಮಿಕಲ್ಸ್ ಲಿ., (ಎಂ.ಎ.ಸಿ.ಸಿ)
11. ಮಹದೇವ ಜವಳಿ ಗಿರಣಿ ನಿ., (ಎಂ.ಟಿ.ಎಂ.)

ಆ) ಈ ಕೆಳಗಿನ ಹತ್ತು ಸರ್ಕಾರಿ ಸ್ವಾಮ್ಯದ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ನಷ್ಟದಲ್ಲಿವೆ:-

1. ಎಂ.ಪಿ.ಎಂ.
2. ಎಂ.ಇ.ಐ
3. ಕೆ.ಎಸ್ ಅಂಡ್ ಡಿ.ಎಲ್
4. ಎನ್.ಜಿ.ಇ.ಎಫ್
5. ಎಂ.ಎಲ್. ಡಬ್ಲ್ಯೂಎಲ್
6. ಎಂ.ಎಂ.ಎಲ್
7. ಕೆ.ಟಿ.ಎಲ್.
8. ಎಂ.ಎ.ಸಿ.ಸಿ.
9. ಎಂ.ಟಿ.ಎಂ.
10. ಹೆಚ್.ಜಿ.ಎಂ.ಎಲ್.

ಸದರಿ ಕಂಪನಿಗಳ ನಷ್ಟಕ್ಕೆ ಈ ಕಾರಣಗಳೂ ಸೇರಿವೆ;

1. ಖಾಸಗೀ ಸಂಸ್ಥೆಗಳಿಂದ ಪೈಪೋಟಿ,

2. ಕಾಲಕಾಲಕ್ಕೆ ಬದಲಾಗುವ ತಂತ್ರಜ್ಞಾನ / ಆಧುನೀಕರಣಗಳಲ್ಲಿ ಸಾಕಷ್ಟು ಬಂಡವಾಳ ಹೂಡದೇ ಇರುವುದು.

3. ಸರ್ಕಾರಿ ಸ್ವಾಮ್ಯದ ಉದ್ದಿಮೆಗಳಲ್ಲಿ ಆಡಳಿತದ ತೊಡಕು.

ಇ) ಈ ಕೆಳಕಂಡ ಸರ್ಕಾರಿ ಸ್ವಾಮ್ಯದ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳನ್ನು ಮುಚ್ಚಲು ಆದೇಶ ನೀಡಲಾಗಿದೆ.

1. ಎನ್.ಜಿ.ಇ.ಎಫ್.
2. ಎಂ.ಎಲ್.ಡಬ್ಲ್ಯೂಎಲ್
3. ಕೆ.ಟಿ.ಎಲ್.
4. ಎಂ.ಎ.ಸಿ.ಸಿ.
5. ಮಹದೇವ ಜವಳಿ ಗಿರಣಿ

ನಷ್ಟದಲ್ಲಿರುವ ಸರ್ಕಾರ ಸ್ವಾಮ್ಯದ ಉದ್ದಿಮೆಗಳನ್ನು ಪುನಶ್ಚೇತನಗೊಳಿಸಲು ಸರ್ಕಾರವು ಸಾಧ್ಯವಾದಷ್ಟು ಪ್ರಯತ್ನ ಮಾಡಿದೆ.

ವಕ್ಫ್ ಬೋರ್ಡ್‌ಗಳ ಕಾರ್ಯನಿರ್ವಹಣೆ

2124 (2531) ಶ್ರೀ ಯು.ಆರ್. ಸಭಾಪತಿ (ಉಡುಪಿ): ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ವಿವಿಧ ಜಿಲ್ಲೆಗಳ ವಕ್ಫ್ ಮಂಡಳಿಗಳಿಗೆ 2001-02, 2002-03 ರವರೆಗೆ (28-2-2003) ರವರೆಗೆ ಬಿಡುಗಡೆಗೊಳಿಸಿದ ಹಣವೆಷ್ಟು;

ಆ) ರಾಜ್ಯದ ಎಷ್ಟು ಪ್ರಾಥನಾ ಮಂದಿರಗಳಿಗೆ 1-4-2002 ರಿಂದ 28-2-2003 ರವರೆಗೆ ಅನುದಾನ ಬಿಡುಗಡೆ ಮಾಡಲಾಗಿದೆ?

ಶ್ರೀ ಎಂ.ಎಲ್. ಉಸ್ತಾದ್ (ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು)

ಅ) ರಾಜ್ಯದ ವಿವಿಧ ಜಿಲ್ಲೆಗಳ ವಕ್ಫ್ ಸಲಹಾ ಸಮಿತಿಯ ಅಧ್ಯಕ್ಷರು : ಆಡಳಿತಾಧಿಕಾರಿಗಳಿಗೆ ಗೌರವ ಧನ, ಸಿಬ್ಬಂದಿ ವೇತನ, ಸಮಿತಿಯ ಕಛೇರಿಯ ಸಾದಿಲ್ವಾರು ದೂರವಾಣಿ ಹಾಗೂ ಕಟ್ಟಡ ಬಾಡಿಗೆಗಾಗಿ 2001-2002ನೇ ಸಾಲಿನಲ್ಲಿ ರೂ. 78,13,807-00 ಹಾಗೂ 2002-2003ಕ್ಕೆ (28-2-2003)) ರವರೆಗೆ ರೂ. 82,79,823-00 ಬಿಡುಗಡೆ ಮಾಡಲಾಗಿದೆ.

ಆ) ಪ್ರಾರ್ಥನಾ ಮಸೀದಿಗಳು ಸೇರಿದಂತೆ, 1-4-2002 ರಿಂದ 28-2-2003 ರವರೆಗೆ ಒಟ್ಟು 946 ವಕ್ಫ್ ಸಂಸ್ಥೆಗಳಿಗೆ ರೂ. 275.00 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿದೆ.

ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ಮಂಡಳಿಯ ಕಾರ್ಯಕ್ರಮ

2125 (2532) ಶ್ರೀ ಯು.ಆರ್. ಸಭಾಪತಿ (ಉಡುಪಿ): ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ಮಂಡಳಿ 2002-03ರಲ್ಲಿ ಹಾಕಿಕೊಂಡ ಕಾರ್ಯಕ್ರಮಗಳು ಯಾವುವು? (ವಿವರಗಳನ್ನು ತಿಳಿಸುವುದು)